‘‘ಮೃತ್ಯೂ ಅನ್ನೋನ ಅಕ್ಕ, ಹೆಂಡತಿ ಇದ್ರೂ ಕಪ್ಪಾ. ಈಗಿಲ್ಲ. ನೀವುಗೊಳೆ ಅವನ್ಗೆ ಏನ್ ಗತಿ ಕಾಣಿಸಬೇಕೋ ಕಾಣಿಸಿಬುಡಿ. ಸಿಟಿಯಿಂದ ಇಲ್ಲಿಗ್ ಬರಾ ತೊಂದ್ರೆ ಯಾಕ್ ತಗಂಡ್ರಿ ಅಂತೀನಿ’’ ಪಾರೋತಕ್ಕ ಖಡಾಖಂಡಿತದ ಧ್ವನಿಯಲ್ಲಿ ನುಡದು ಹಟ್ಟಿ ವಳಕ್ಕೆ ನಡೆದಿದ್ದಳು. ಜನರ ಗುಂಪು ಒಳಕ್ಕೂ ಚಿತ್ತೈಸಿತ್ತು. ‘ಇದೇನಾ ಇದು ಪಾರೋತವ್ವ. ಮಕ್ಕಳಂಗೆ ಈ ಐಲಾಟ. ಸತ್ತೋಯ್ತು ಇದ್ದ ಕೂಸ ಬದುಕಿಸಿಕೊಂಡೋಳು ನೀನು. ಅಂವ ಸತ್ತಾಗ ವಪ್ಪ ಮಾಡಲ್ಲ ಅಂತೀಯಲ್ಲ. ಧರ್ಮುವಾ ಇದು. ಅವ್ನೇನೋ ನೀಸ್‌ಕಂಡಾ. ತಪ್ಪೂ ಮಾಡಿರಬೋದು. ಹಂಗಂತ ಅವನ ಹೆಣಾನಾ ಕಾಡ್ ಹೆಣಾ ಮಾಡಾಕಾದಾತಾ? ಹಂಗಂದು ಅನ್ಯಾಯಕಾತಿ ಆದೀಯಾ?’’ ಊರೋರ ಮಾತುಗಳ ಒಟ್ಟರ್ಥ ಇದಾಗಿತ್ತು.

“ಅನ್ಯಾಯಕಾತಿ ಆದೀನೋ ಬುಟ್ಟಿನೋ ಕಾಣಿ. ಅಷ್ಟರ ಮ್ಯಾಲೆ ಇಚ್ಛೆ ಇರಾರು ತಾವೇ ಮುಂದೆ ನಿಂತು ‘ವಪ್ಪ’ ಮಾಡ್ಕಳ್ಳಲಿ. ನನ್ನಟ್ಟಿ ಮುಂದೆ ಹೆಣ ತರಾದು ಬ್ಯಾಡಿ” ಪಾರೋತವ್ವ ಚಂಡಿ ಹಿಡಿದವಳಂತೆ ನುಡದು, ಎದುರಿನವರು ನುಡಿಯಲು ತಾವಿಲ್ಲದಂತೆ ಕ್ವಾಣೆ ಸೇರಿ ಕದವಿಕ್ಕಿಕೊಂಡಿದ್ದಳು. ಇದೊಳ್ಳೆ ಚೆಂದವಾಯಿತಲ್ಲ. ಗೌರಿ ಹಿಂಗೆಲ್ಲ ಆಡಿದ್ದರೆ ಅದಕ್ಕೊಂದು ಲೆಕ್ಕವಿರುತ್ತಿತ್ತು. ಮೃತ್ಯುವಿಗೆ ಅವ್ವನಂತಿದ್ದು ಅವ್ವನೇ ಆಗಿದ್ದ ಪಾರೋತವ್ವನೇ ಹಿಂಗೆ ಹಟವಿಡಿದರೆ ಗತಿಯೇನು?

ಮತ್ತೆ ಮೃತ್ಯುವಿನ ‘ವಪ್ಪ’ದ ವಿಚಾರ ಎಲ್ಲರ ಬಾಯಿಗಳಲ್ಲಿ ಚರ್ಚೆಯಾಗತೊಡಗಿತ್ತು. ಪಾರೋತವ್ವನಿಗೆ ಬುದ್ಧಿ ಹೇಳಲು ಯಾರ ಬಾಯಿಗಳೂ ಏಳದಾದವು. ಗೌರಿಯಂತೂ ಅದಾಗಲೇ ಸುಡುವ ಹಾಲು ಕುಡಿಸಿ ಗಂಗೆಯಂತೆ ತಂಪಾಗಿ ಕುಳಿತಿದ್ದಾಳೆ. ಇಬ್ಬರ ವಿಷಯದಲ್ಲೂ ಮೃತ್ಯು ಮಾಡಿದ್ದ ತಪ್ಪು ಅಂತಿಂಥದ್ದಲ್ಲ. ಹಾಗೆಂದು ಮೃತ್ಯುವಿನ ಹೆಣವನ್ನು ಕಾಡು ಹೆಣದಂತೆ ಹಾಗೇ ಬಿಡಲಾದೀತೆ? ಎಷ್ಟೇ ಆದರೂ ಅವನು ಊರ ಮಗನಲ್ಲವೆ? ಹಟ್ಟಿಗ್ ಇಷ್ಟ್ ರೂಪಾಯಿ ಅಂತ ಚಂದಾ ಎತ್ತಿಯಾದರೂ ಅವನ ವಪ್ಪವ ಮಾಡಿ ಮುಗಿಸಲೇಬೇಕು.

ಗೌರಿ ಅವರಂದುಕೊಂಡಂತೆ ಅಲ್ಲೇ ತಣ್ಣಗೆ ಕುಂತಿದ್ದಳು. ಅವಳ ಒಳಗೆ ಆರಿಸಲಾರದ ದಾವಾನಲವೊಂದು ಭಗಭಗ ಉರಿಯುತ್ತಿತ್ತು. ಇಂಥದ್ದೊಂದು ಅಂತ್ಯದ ಕ್ಷಣ ಬದುಕಲ್ಲಿ ಯಾಕಾದರೂ ಎದುರಾಗಬೇಕಿತ್ತು? ಈ ಬಗೆಯಲ್ಲಿ ಆತ ನೆನಪಾಗಬಹುದೆಂದು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲವಲ್ಲ. ಮೃತ್ಯುವೇನೂ ಸುಂದರನಲ್ಲ. ವಿದ್ಯಾವಂತನಲ್ಲ, ಬುದ್ಧಿವಂತನಲ್ಲ, ದುಡಿದವನಲ್ಲ, ಸಂಪಾದಿಸಿದವನೂ ಅಲ್ಲ. ಅದು ಯಾಕೆ ತನ್ನನ್ನ ಆ ಬಗೆಯಲ್ಲಿ ನಿಕೃಷ್ಟವಾಗಿ ನೋಡಿ ಕೈಬೀಸಿ ನಡೆದು ಬಿಟ್ಟಿದ್ದನು. ಒಂದೇ ಹಟ್ಟಿಯಲ್ಲಿದ್ದರೂ ಹತ್ತಾರು ವರ್ಷಗಳು ಜತೆಯಲ್ಲಿ ಕಳೆದಿದ್ದರೂ ಒಂದು ನೋಟ ಸೇರಿಸಲಿಲ್ಲ. ಇದೊಂದು ಜೀವಿ ಎಂದು ಎರಡು ಮಾತನಾಡಿಸಲಿಲ್ಲ. ಬಲವಂತವೆನ್ನಿಸಿಕೊಂಡ ಲಗ್ನಗಳು ಸುತ್ತಮುತ್ತ ಎಷ್ಟಿರಲಿಲ್ಲ. ವಾರ ಒಪ್ಪೊತ್ತು ಕಳೆಯುವಲ್ಲಿ ಒಪ್ಪಿತವಾಗಿ ಸಲೀಸಾಗಿ ಅವರ ಸಂಸಾರಗಳು ನಡೆದೇ ನಡೆದವಲ್ಲ. ಹಾಗೆ ನೋಡಿದರೆ ತನಗೂ ಅದು ಬಲವಂತದ ಲಗ್ನವೆ? ಆದರೂ ಒಪ್ಪಿದ್ದು, ಬಾಳಬೇಕೆಂದು. ಅದೆಂಥ ಹೊಂದಾಣಿಕೆ. ಪ್ರಾಣವನ್ನು ಒತ್ತೆ ಇಟ್ಟು ಮಾಡಿಕೊಂಡಂಥ ಹೊಂದಾಣಿಕೆ.

ಅವ್ವ ನೂರು ದೀಪಗಳ ಕಣ್ಣಲ್ಲಿ ಉರಿಸುತ್ತಾ ಎಲ್ಲವೂ ಸರಿಯೇ ಆಗಿಬಿಡುತ್ತದೆಂದು ನಂಬಿಕೊಂಡಿದ್ದಳು. ಒಳಗೆ ನಡೆದದ್ದು ಕಾರ್ಕೋಟಕ ವಿಷದ ವಮನ. ಅವನ ನಾಲಿಗೆಯಲ್ಲಿ ಅದು ಹೇಗೆ ಅಷ್ಟು ನಂಜು ತುಂಬಿತ್ತು. ಅಷ್ಟು ನಂಜು ತುಂಬಿಕೊಂಡವರು ಬದುಕಲುಂಟೇ?! ಇಡೀ ದೇಹವ ಇಂಚು ಇಂಚಾಗಿ ಅವನ ಮಾತುಗಳ ನಂಜು ಆವರಿಸಿ ನುಂಗಿಕೊಂಡಂಥ ನೆನಪುಗಳು! ಬತ್ತಲೆಯಾಗಿಸದೆಯೂ ಬತ್ತಲೆಯಾದ ಅಖಂಡ ನೋವು! ಯಾರೇನು ರೂಪ ವಿಭ್ರಮಗಳನ್ನು